ಕರ್ನಾಟಕ ಸರಕಾರ
## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001. ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ : 13-02-2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | **Monthly National Lok Adalat:**<br><br>**Inauguration:**<br><br>**Justice N.K. Patil**<br><br>**Judge, High Court of Karnataka and Executive Chairman, Karnataka State Legal Services Authority**<br><br>**Preside:**<br><br>**JusticeK.L Manjunath**<br><br>**Judge, High Court of Karnataka** | **14-2-2015**<br><br>**Saturday**<br><br>**10-45 A.M.** | **Conference Hall of City Civil Court,**<br><br>**Bangalore** |
| 2 | ಬೆಳಗ್ಗೆ 11-30 ಗಂಟೆಗೆ ಗಡಿನಾಡು ಅಧ್ಯಯನ ವರದಿ ಕುರಿತಂತೆ ಸಭೆ. ನಂತರ ಪತ್ರಿಕಾಗೋಷ್ಠಿ:<br>ಶ್ರೀ ಎಲ್. ಹನುಮಂತಯ್ಯ, ಅಧ್ಯಕ್ಷರು ಕನ್ನಡ ಅಭಿವೃದ್ಧಿ ಪ್ರಾಧಿಕಾರ | 16-02-2015<br>ಸೋಮವಾರ<br>ಮಧ್ಯಾಹ್ನ<br>12-30 ಗಂಟೆಗೆ | ಕೊಠಡಿ ಸಂಖ್ಯೆ 238<br>ಎರಡನೆ ಮಹಡಿ,<br>ವಿಕಾಸ ಸೌಧ<br>ಬೆಂಗಳೂರು – 560 001 |
| 3 | ಗೌರವಾನ್ವಿತ ನ್ಯಾಯಮೂರ್ತಿ ಶ್ರೀ ವಿನೀತ್ ಶರಣ್ ಅವರಿಗೆ ಕರ್ನಾಟಕ ಉಚ್ಚ ನ್ಯಾಯಾಲಯದ | 16-02-2015<br>ಸೋಮವಾರ<br>ಸಂಜೆ | ಬ್ಯಾಂಕ್ವೆಟ್ ಹಾಲ್,<br>ರಾಜ ಭವನ,<br>ಬೆಂಗಳೂರು – 560 001 |

| | | | |
|---|---|---|---|
| | ನ್ಯಾಯಮೂರ್ತಿ ಪದವಿಯ ಅಧಿಕಾರ ಗ್ರಹಣ.<br><br>ಪ್ರಮಾಣ ವಚನ:<br><br>ಶ್ರೀ ವಜೂಭಾಯಿ ವಾಲಾ,<br>ರಾಜ್ಯಪಾಲರು, ಕರ್ನಾಟಕ ಸರ್ಕಾರ. | 6–00 ಗಂಟೆಗೆ | |
| 4 | ರಾಷ್ಟ್ರಕವಿ ಕುವೆಂಪು ಅವರ ಕಂಚಿನ ಪ್ರತಿಮೆಯ ಅನಾವರಣ ಶ್ರೀ ಸಿದ್ದರಾಮಯ್ಯ., ಮುಖ್ಯಮಂತ್ರಿಗಳು<br><br>'ಮಲೆಗಳಲ್ಲಿ ಮದುಮಗಳು' ನಾಟಕ ಪ್ರದರ್ಶನದ ಚಾಲನೆ<br><br>ಶ್ರೀಮತಿ ಉಮಾಶ್ರೀ,<br>ಕನ್ನಡ ಮತ್ತು ಸಂಸ್ಕೃತಿ ಸಚಿವರು | 16–02–2015<br>ಸೋಮವಾರ<br>ಸಂಜೆ<br>6–30 ಗಂಟೆಗೆ | ಕಲಾಗ್ರಾಮ,<br>ಮಲ್ಲತ್ತಹಳ್ಳಿ,<br>ಬೆಂಗಳೂರು |

**ನಿರ್ದೇಶಕರ ಪರವಾಗಿ**

## ಪತ್ರಿಕಾ ಪ್ರಕಟಣೆ

# ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಮುಖ್ಯಮಂತ್ರಿಗಳು ನೀಡಿದ ಉತ್ತರದ ಅಂಶಗಳು

**ಬೆಂಗಳೂರು, ಫೆಬ್ರವರಿ 13 (ಕರ್ನಾಟಕ ವಾರ್ತೆ)**

ರಾಜ್ಯ ವಿಧಾನ ಸಭೆಯಲ್ಲಿ ಫೆಬ್ರವರಿ 2 ರಂದು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣಕ್ಕೆ ವಂದನೆ ಸೂಚಿಸುವ ಪ್ರಸ್ತಾಪದ ಮೇಲಿನ ಚರ್ಚೆಗೆ ಮುಖ್ಯಮಂತ್ರಿಗಳು ಇಂದು ವಿಧಾನ ಸಭೆಯಲ್ಲಿ ಉತ್ತರ ನೀಡಿದ್ದು ಅವರ ಉತ್ತರದ ಆಯ್ದ ಅಂಶಗಳು ಇಂತಿವೆ.

- ರಾಜ್ಯ ಸರ್ಕಾರದ ನೀತಿ ದೂರದೃಷ್ಟಿ ಪ್ರಜಾಪ್ರಭುತ್ವದಲ್ಲಿ ಇಟ್ಟಿರುವ ನಂಬಿಕೆ ಇವುಗಳನ್ನು ಮುಂದಿಟ್ಟುಕೊಂಡು ರಾಜ್ಯ ಸರ್ಕಾರವು ನಡೆದಿದೆ.

- ಚರ್ಚೆಯಲ್ಲಿ 30 ಶಾಸಕರು ವಿವಿಧ ಪಕ್ಷಗಳ ಸದಸ್ಯರು ಪಾಲ್ಗೊಂಡಿದ್ದಾರೆ. ಇವರೆಲ್ಲರ ಚರ್ಚೆಗಳು ಹೇಳಿಕೆಗಳು ಸರಿ ಇದೆ ಎಂದು ನಿರೀಕ್ಷಿಸಲಾಗದು

- ರಾಜ್ಯ ಸರ್ಕಾರದಲ್ಲಿ ಮಾಡಿರುವ ಎಲ್ಲ ಕಾರ್ಯಗಳು ಸರಿ ಇದೆ ಎಂದು ಹೇಳಲಾಗದು. ಸಣ್ಣ ಪುಟ್ಟ ದೋಷಗಳಿರಬಹುದು.

- 2013 ರ ಚುನಾವಣೆಯಲ್ಲಿ ರಾಜ್ಯದ ಜನ ಇಟ್ಟ ವಿಶ್ವಾಸಕ್ಕೆ ಧಕ್ಕೆ ಭಾರದ ರೀತಿಯಲ್ಲಿ ಆಡಳಿತ ನಡೆಸುತ್ತಿದ್ದೇವೆ.

- ಕಳೆದ ಒಂದು ವರ್ಷ 9 ತಿಂಗಳಲ್ಲಿ ಪಾರದರ್ಶಕವಾಗಿ ಜನಪರವಾಗಿ ಜನಗಳಿಗೆ ಸ್ಪಂದಿಸುತ್ತಾ ಪ್ರಾಮಾಣಿಕ ಆಡಳಿತ ಕೊಡಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ.

- ಪ್ರಚಾರ ಮಾಡಿಕೊಳ್ಳಲು ಹೋಗಿಲ್ಲ. ಪ್ರಚಾರದ ಹುಚ್ಚು, ಗೀಳು ನಮಗಿಲ್ಲ.

- ಪತ್ರಿಕೆಗಳಲ್ಲಿ ಬಂದ ಕೆಲ ವರದಿಗಳು ಸತ್ಯಕ್ಕೆ ದೂರವಾದುದು

- ಕಳೆದ 1 ವರ್ಷ 9 ತಿಂಗಳಲ್ಲಿ ಉತ್ತಮ ಆಡಳಿತ ನೀಡುವಲ್ಲಿ ದಿಟ್ಟ ಹೆಜ್ಜೆ ಇಟ್ಟಿದ್ದೇವೆ. ಈ ಸರ್ಕಾರ 5 ವರ್ಷ ಪೂರ್ಣಗೊಳಿಸಲಿದೆ. ಮುಂದಿನ 3 ವರ್ಷ 3 ತಿಂಗಳು ನಾನೇ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸುತ್ತೇನೆ. 2018 ರಲ್ಲಿಯೂ ಕಾಂಗ್ರೆಸ್ ಸರ್ಕಾರವೇ ಅಧಿಕಾರಕ್ಕೆ ಬರಲಿದೆ.

- ಚುನಾವಣಾ ಪೂರ್ವದಲ್ಲಿ ರಾಜ್ಯದ ಜನರಿಗೆ 165 ಭರವಸೆ ನೀಡಿದ್ದೆವು. ಕಳೆದ 2 ಆಯವ್ಯಯಗಳಲ್ಲಿ 95 ಭರವಸೆ ಈಡೇರಿಸಿದ್ದೇವೆ.

- ರೈತರು, ಬಡವರು, ದಲಿತರು, ಕಾರ್ಮಿಕರು, ಹಿಂದುಳಿದವರ ಪರವಾಗಿ ಸರ್ಕಾರವಿದೆ ಎಂಬುದನ್ನು ಸಾಬೀತು ಮಾಡಿದ್ದೇವೆ.

- ಅಧಿಕಾರ ಸ್ವೀಕರಿಸಿದ 24 ಗಂಟೆಯೊಳಗೆ ನೀಡಿದ ಭರವಸೆಗಳನ್ನು ಜಾರಿಗೊಳಿಸುವ ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಆರಂಭಿಸಿದೆವು.

- ಹಾಲಿನ ಸಬ್ಸಿಡಿ 1 ಲೀಟರ್‌ಗೆ 4 ರೂ. ನಂತೆ ರೈತರಿಗೆ ನೀಡಿದೆವು. ಇದರಿಂದ 35 ಲಕ್ಷ ಲೀಟರ್ ಹಾಲಿನ ಉತ್ಪಾದನೆ ಈಗ 63 ಲಕ್ಷ ಲೀಟರ್‌ಗೆ ಏರಿದೆ. ಇದು ರೈತರ ಆರ್ಥಿಕ ಚಟುವಟಿಕೆ ಹೆಚ್ಚಲು ಕಾರಣವಾಗಿದೆ.

- ಹಗರಣ, ಭ್ರಷ್ಟಾಚಾರಗಳಿಗೆ ಒಳಗಾಗದೇ ಪ್ರಾಮಾಣಿಕವಾಗಿ ಆಡಳಿತ ನೀಡಿದ್ದೇವೆ.

- ಅರ್ಕಾವತಿ ಬಡಾವಣೆ ಕುರಿತ ದೂರಿಗೆ ನ್ಯಾಯಾಂಗ ತನಿಖೆಗೆ ಆಯೋಗ ನೇಮಕ ಮಾಡಿದೆ ಈ ಸರ್ಕಾರ ಒಂದೇ ಒಂದು ಗುಂಟೆಯು ಜಮೀನನ್ನು ಡಿ ನೋಟಿಫೈ ಮಾಡಿಲ್ಲ.

- 2014–15 ರಲ್ಲಿ ರಾಜ್ಯ ಸರ್ಕಾರವು ತನ್ನ ಕರ ವಸೂಲಾತಿಯಲ್ಲಿ 69,870 ಕೋಟಿ ರೂ.ಗಳ ಗುರಿ ಹೊಂದಿದ್ದು ಜನವರಿ ಅಂತ್ಯದವರೆಗೆ 55,726 ಕೋಟಿ ಕರ ವಸೂಲಾತಿ ಮೂಲಕ ಶೇ. 80 ರ ಸಾಧನೆ ಮಾಡಿದೆ. ಆರ್ಥಿಕ ಬೆಳವಣಿಗೆಯ ಗುರಿ ಶೇ. 14.5 ರಷ್ಟು ಹಾಕಿಕೊಂಡಿದ್ದು ಈಗಾಗಲೇ ಶೇ. 14.3 ರಷ್ಟು ಸಾಧನೆ ಮಾಡಿದ್ದು ಆರ್ಥಿಕ ವರ್ಷದ ಅಂತ್ಯದೊಳಗೆ ಸಂಪೂರ್ಣ ಗುರಿ ಮುಟ್ಟಲಿದ್ದೇವೆ.

- ವಾಣಿಜ್ಯ ತೆರಿಗೆ ವಸೂಲಾತಿಯಲ್ಲಿ ಈ ವರ್ಷ 30,000 ಕೋಟಿ ರೂ.ಗಳಿಗೂ ಅಧಿಕ ವಸೂಲಾತಿಯಾಗಿದೆ.

- ಅಬಕಾರಿ ತೆರಿಗೆ ಸಂಗ್ರಹವು 11220 ಕೋಟಿ ರೂ. ಆಗಿದೆ.

- ಮುದ್ರಾಂಕದ ಮೇಲಿನ ತೆರಿಗೆ ವಸೂಲಾತಿ 6,677 ಕೋಟಿ ಆಗಿದೆ.

- ದಕ್ಷಿಣ ಭಾರತದಲ್ಲಿಯೇ ಕರ್ನಾಟಕವು ತೆರಿಗೆ ಸಂಗ್ರಹದಲ್ಲಿ ಮೊದಲ ಸ್ಥಾನದಲ್ಲಿದೆ.

- ಈ ರಾಜ್ಯ ಸರ್ಕಾರವು ಲವಲವಿಕೆಯಿಂದ ಚಟುವಟಿಕೆಯಿಂದ ಹಾಗೂ ಜೀವಂತಿಕೆಯಿಂದ ಆಡಳಿತ ಕಾರ್ಯ ನಿರ್ವಹಿಸುತ್ತಿದೆ.

- ಭಾಗ್ಯಜ್ಯೋತಿ, ಕುಟೀರಜ್ಯೋತಿ, ಹಳೆಬಾಕಿ ಮನ್ನಾ ಮಾಡಿ ಪುನ: ವಿದ್ಯುತ್ ಸಂಪರ್ಕ ನೀಡಲಾಗಿದೆ.

- ರಾಜ್ಯದ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಅಗತ್ಯ, ತ್ವರಿತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

- ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ 2011 ರಲ್ಲಿ ಕರೆಯಲಾದ 362 ಗೆಜೆಟೆಡ್ ಪ್ರೊಬೆಷನರ್ಸ್ ನೇಮಕಾತಿ ಬಗ್ಗೆ ಸುದೀರ್ಘ ಪ್ರಸ್ತಾಪವಾಗಿದೆ. ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅನ್ಯಾಯ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಅಕ್ರಮ ದೂರುಗಳ ಆಧರಿಸಿ ವರದಿ ಆಧರಿಸಿ ಅಡ್ವೋಕೇಟ್ ಜನರಲ್ ಪರಿಶೀಲಿಸಿ ನೀಡಿದ ವರದಿ, ಸಿ.ಐ.ಡಿ. ತನಿಖೆ ಇನ್ನಿತರ ತನಿಖೆಗಳ ನಂತರ ಆಯ್ಕೆ ಪ್ರಕ್ರಿಯೆ ರದ್ದುಪಡಿಸಿದ್ದೇವೆ.

- ರಾಜ್ಯ ಸರ್ಕಾರವು ಭ್ರಷ್ಟಾಚಾರ ನಿರ್ಮೂಲನೆ ಕುರಿತಂತೆ ವಿವೇಚನೆಯಿಂದ ತೀರ್ಮಾನ ಮಾಡಿದೆ.

- ಕಾನೂನು ಸುವ್ಯವಸ್ಥೆ ಕುರಿತಂತೆ ಮಾಹಿತಿ ನೀಡಿದ ಮುಖ್ಯ ಮಂತ್ರಿಗಳು ರಾಜ್ಯದಲಿಕೊಲೆ ಪ್ರಕರಣಗಳಿಗೆ ಸಂಬಂಧಿಸಿದಂತ್ಲೆ 2010, 2011 ಸಾಲಿಗೆ ಹೋಲಿಸಿದರೆ 2013 ರಲ್ಲಿ 1601, 2014 ರಲ್ಲಿ 1632 ಪ್ರಕರಣಗಳ್ಳು ವರದಿಯಾಗಿದೆ.

- ಅತ್ಯಾಚಾರವನ್ನು ತಡೆಗಟ್ಟಲು ಸೂಕ್ತ ಕ್ರಮಗಳನ್ನು ಸರ್ಕಾರ ಕೈಗೊಂಡಿದ್ದು ಅತ್ಯಾಚಾರಿ ವಿರುದ್ಧ ಕಠಿಣ ಕ್ರಮಕೈಗೊಳ್ಳುವಂತೆ ಪೋಲಿಸ್ ಇಲಾಖೆಗೆ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದರು.

- ಅತ್ಯಾಚಾರ ಪ್ರಕರಣಗಳ ಕುರಿತು ಯಾವುದೇ ದೂರಗಳು ಬಂದಲ್ಲಿ ಕೂಡಲೆ ದೂರನ್ನು ಸ್ವೀಕರಿಸಿ ಅಂತಹ ಅಪರಾದಿಗಳ ವಿರುದ್ದ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ ಎಂದರು.

- ಅತ್ಯಾಚಾರ ಪ್ರಕರಣಗಳ ವಿಚಾರಣೆಗಾಗಿ ರಾಜ್ಯದ್ಯಾಂತ 10 ತ್ವರಿತ ನ್ಯಾಯಾಲಾಯಗಳನ್ನು ಸ್ಥಾಪಿಸಲಾಗುವುದು.

- ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಶಾಲೆಗಳಲ್ಲಿ ಸಿಸಿ ಕ್ಯಾಮರಗಳನ್ನು ಅಳವಡಿಸಲು ತೀರ್ಮಾನಿಸಲಾಗಿದೆ.

- ಹೆಚ್1ಎನ್1 ಜನರಲ್ಲಿ ಆತಂಕ ಉಂಟುಮಾಡಿದ್ದು, ಸರ್ಕಾರವು ಎಲ್ಲಾ ರೀತಿ ಮುಂಜಾಗ್ರತ ಕ್ರಮಗಳನ್ನು ಕೈಗೊಂಡಿದೆ. ರಾಜ್ಯದಲ್ಲಿ 686 ಪ್ರಕರಣಗಳು ಪತ್ತೆಯಾಗಿದ್ದು, 15 ಮಂದಿ ಮೃತಪಟ್ಟಿರುವ ವದರಿಯಾಗಿದೆ.

- ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳಿಗೆ ಅಗತ್ಯವಾದ ಔಷಧಿಗಳನ್ನು ಒದಗಿಸಲಾಗಿದೆ.

- ವೈದ್ಯರ ಹಾಗೂ ತಾಂತ್ರಿಕ ಹುದ್ದೆಗಳನ್ನು ಶೀಘ್ರದಲ್ಲಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

- ರಾಜ್ಯದಲ್ಲಿ ಕುಡಿಯುವ ನೀರಿಗೆ 1496.19 ಕೋಟಿ ಮೀಸಲಿಡಲಾಗಿದೆ, 1086 ಕೋಟಿ ರೂ ವೆಚ್ಚವಾಗಿದೆ, ಶೇ73 ಪ್ರಗತಿಯನ್ನು ಸಾಧಿಸಲಾಗಿದೆ. ಕುಡಿಯುವ ನೀರಿಗೆ ಹಣದ ಕೊರತೆ ಆಗದಂತೆ ಹಣ ಬಿಡುಗಡೆ ಮಾಡಲಾಗುವುದು.

- ರಾಜ್ಯದಲ್ಲಿ 2013–14 ರಲ್ಲಿ 6 ಲಕ್ಷ ಶೌಚಾಲಯಗಳ ನಿರ್ಮಾಣದ ಗುರಿ ಹೊಂದಿದ್ದು. 2014 ಮಾರ್ಚ ಅಂತ್ಯಕ್ಕೆ 550517 ಲಕ್ಷ ನಿರ್ಮಾಣವಾಗಿದೆ, 2014–15 ಜನವರಿ ಅಂತ್ಯಕ್ಕೆ 6.05 ಶೌಚಾಲಗಳನ್ನು ನಿರ್ಮಿಸಲಾಗಿದೆ.

ಬಾಬು/ಎನ್ಎಸ್/ಕೆಎಂ

**ಸದ್ಯಕ್ಕೆ ಒತ್ತುವರಿ ತೆರವು ಇಲ್ಲ**

ಬೆಂಗಳೂರು, ಫೆಬ್ರವರಿ 13 (ಕರ್ನಾಟಕ ವಾರ್ತೆ

ಕರ್ನಾಟಕ ಭೂ ಕಂದಾಯ ಕಾಯ್ದೆಯಡಿ ಕುಮ್ಕಿ, ಬಾಣೆ, ಕಾಣೆ, ಬೆಟ್ಟ, ಹಾಡಿ ಕಾನ ಮತ್ತು ಸೊಪ್ಪಿನ ಬೆಟ್ಟ, ಜಮಾ ಬಾಣೆ ಮತ್ತು ಮೋಟಸ್ಥಳ ತರಿ ಜಮೀನುಗಳನ್ನು ಹಾಗೂ ಪ್ಲಾಂಟೇಶನ ಬೆಳೆಗಳಾದ ಕಾಫಿ, ಮೆಣಸು, ಏಲಕ್ಕಿ ಬೆಳೆಗಳನ್ನು ಬೆಳದ ಪ್ರದೇಶದಲ್ಲಿನ ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣಕ್ಕಾಗಿ ನಮೂನೆ 50 ಮತ್ತು 53 ರಡಿ ಅರ್ಜಿ ಸಲ್ಲಿಸಿದ್ದು, ಬಾಕಿ ಇರುವ ಅರ್ಜಿಗಳನ್ನು ಸಮಿತಿಯಲ್ಲಿ ತೀರ್ಮಾನುವಾಗುವವರೆಗೆ ಒತ್ತುವರಿ ತೆರವುಗೊಳಿಸಬಾರದು ಎಂದು ದಿನಾಂಕ: 17–01–2015 ರಂದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸುತ್ತೋಲೆ ಹೊರಡಿಸಲಾಗಿದೆ. ಅರ್ಹ ಫಲಾನುಭವಿಗಳಿಗೆ, ಭೂ ಮಂಜೂರಾತಿ ಪತ್ರ ಸಾಗುವಳಿ ಚೀಟಿಯನ್ನು ಸ್ವರಿತವಾಗಿ ವಿತರಿಸಲು ಎಲ್ಲಾ ಜಿಲ್ಲಾಧಿಕಾರಿಗಳಗೆ ಸೂಚಿಸಲಾಗುವುದುಎಂದು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಶ್ರೀ ಟಿ.ಬಿ. ಜಯಚಂದ್ರ ಅವರು ಇಂದು ವಿಧಾನಸಭೆಯಲ್ಲಿ ಪ್ರಕಟಿಸಿದರು.

ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಶ್ರೀ ಜಗದೀಶ್ ಶೆಟ್ಟರ್ ಹಾಗೂ ಇನ್ನಿತರರು ತಂದಿದ್ದ ಗಮನ ಸೆಳೆಯುವ ಸೂಚನೆ ಕುರಿತಂತೆ ಸಚಿವರು ಹೇಳಿಕೆ ನೀಡುತ್ತಿದ್ದರು

ಅನಧಿಕೃತ ಸಾಗುವಳಿ ಸಕ್ರಮೀಕರಣ ಸಮಿತಿ (ಬಗರ್ ಹುಕುಂ ಸಮಿತಿ) ರಚನೆ ಆಗದಿರುವ ವಿಧಾನಸಭಾ ಕ್ಷೇತ್ರದಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಸದಸ್ಯರ ಪ್ರಸ್ತಾವನೆ ಪಡೆದು ಸಮಿತಿಯನ್ನು ರಚಿಸಲಾಗುವುದು ಎಂದು ಸಚಿವರು ತಿಳಿಸಿದರು.

<u>ಸಚಿವರು ವಿಧಾನಸಭೆಯಲ್ಲಿ ನೀಡಿದ ಹೇಳಿಕೆಯ ಉಳಿದ ವಿವರಗಳು ಇಂತಿದೆ:</u>

ಸರ್ಕಾರಿ ಜಮೀನುಗಳಲ್ಲಿ ಅನಧಿಕೃತ ಸಾಗುವಳಿ ಸಕ್ರಮ ಕೋರಿ ಅರ್ಜಿ ಸಲ್ಲಿಸಲು ಮತ್ತೊಮ್ಮೆ ಕಾಲಾವಕಾಶ ನೀಡುವುದು ಸರಿಯಾದ ಕ್ರಮವಲ್ಲ. ಈಗಾಗಲ್ಲೆ ಎರಡು ಬಾರಿ ನಮೂನೆ 50 ಮತ್ತು 53 ರಲ್ಲಿ ಅರ್ಜಿ ಸಲ್ಲಿಸಲು ಆಲಾವಕಾಶ ನೀಡಲಾಗಿದೆ.

ಭೂಕಂದಾಯ ಕಾಯ್ದೆ ಕಲಂ 94ಸಿ ಗ್ರಾಮಾಂರ ಪ್ರದೇಶಗಳ ಸರ್ಕಾರಿ ಜಮೀನುಗಳಲ್ಲಿ ಅನಧಿಕೃತವಾಗಿ ನಿರ್ಮಿಸಿಕೊಂಡಿರುವ ವಾಸದ ಮನೆಗಳ ಸಕ್ರಮೀಕರಣ ಕೋರಿ ಅರ್ಜಿಗಳನ್ನು ದಿನಾಂಕ: 25–12–2014 ರವರೆಗೆ ಸ್ವೀಕರಿಸಿದ್ದು, ಸಾರ್ವಜನಿಕರು ಮತ್ತು ಜನ ಪ್ರತಿನಿಧಿಗಳ ಕೋರಿಕೆಯ ಮೇರೆಗೆ ಅರ್ಜಿ ಸಲ್ಲಿಕೆಯ ಅವಧಿಯನ್ನು ದಿನಾಂಕ : 31–5–2015 ರವರೆಗೆ ವಿಸ್ತರಿಸಲಾಗುವುದು.

ನಗರ ಪ್ರದೇಶಗಳ ಸರ್ಕಾರದ ಅನಧಿಕೃತ ವಾಸದ ಮನೆಗಳನ್ನು ಸಕ್ರಮೀಕರಣಗೊಳಿಸುವ ಬಗ್ಗೆ ಆದಷ್ಟು ಬೇಗ ನಿಯಮಗಳನ್ನು ರಚಿಸಿ ಆದೇಶ ಹೊರಡಿಸಲಾಗುವುದು.

ಭೂಕಂದಾಯ ಕಾಯ್ದೆ ಕಲಂ 94ಸಿ ರಡಿ ಗ್ರಾಮಾಂತರ ಪ್ರದೇಶಗಳ ಅನಧಿಕೃತ ವಾಸದ ಮನೆಗಳನ್ನು ಸಕ್ರಮೀಕರಣ ಗೊಳಿಸುವಾಗ ಗರಿಷ್ಠ 50 80 ವಿಸ್ತೀರ್ಣವನ್ನು ಪರಿಗಣಿಸುವ ಬಗ್ಗೆ ಕ್ರಮ ವಹಿಸಲಾಗುವುದು.

ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ದ್ವಿತೀಯ ದರ್ಜೆ ಮತ್ತು ಪ್ರಥಮ ದರ್ಜೆ ಹುದ್ದೆಗಳನ್ನು ವಿಶೇಷ ನಿಯಮಾವಳಿಗಳ ಮೂಲಕ ನೇಮಕಾತಿ ಮಾಡಲು ಕ್ರಮ ಜರುಗಿಸಲಾಗುವುದು.

ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 192 ಎ ರಡಿಯಲ್ಲಿ ಸರ್ಕಾರಿ ಜಮೀನುಗಳ ಒತ್ತುವರಿ ಮಾಡಿದ ಒತ್ತುವರಿದಾರರ ವಿರುದ್ಧ ಕ್ರಿನಿನಲ್ ಮೊದ್ದಮೆ ದಾಖಲಿಸುತ್ತಿರುವುದನ್ನು ಕೈಬಿಡುವ ಬಗ್ಗೆ ಸಾಧಕ ಭಾದಕಗಳನ್ನು ಪರಿಶಿಲಿಸಿದ ನಿರ್ಧಾರ ತೆಗೆದುಕೊಳ್ಳಾಗುವುದು.

ಗ್ರಾಮ ಲೆಕ್ಕಾಧಿಕಾರಿಗಳು ನಿರ್ವಹಿಸುವಂತಹ ಜಮೀನಿತ ಲೆಕ್ಕಪತ್ರಗಳನ್ನು ಈ ಹಿಂದೆ "ಜಮಾಬಂಧಿ" ಮೂಲಕ ಪರಿಶೀಲಿಸಲಾಗುತ್ತಿದದು, ಹಿಂದಿನಿಂದ ಜಾರಿಯಲ್ಲಿದ್ದ ಮತ್ತು ಈಗ ಬಿಟ್ಟು ಹೋಗಿರುವ ಪದ್ಧತಿಯನ್ನು ಮರು ಜಾರಿಗೆ ತರುವಲಲ್ಲಿ ಹೊಸದಾಗಿ ಸರ್ಕಾರಿ ಆದೇಶವನ್ನು ಹೊರಡಿಸಿ ಕಡ್ಡಾಯವಾಗಿ ಜಮಾಬಂದಿಯನ್ನು ಅನುಷ್ಠಾನಗೊಳಿಸಲು ಎಲ್ಲಾ ಕಂದಾಯ ಅಧಿಕಾರಿಗಳಿಗೆ ನಿರ್ದೇಶಿಸಲಾಗಿದೆ.

ಸಮಾಜ ಪರಿವರ್ತನಾ ಸಮುದಾಯ ಮತ್ತು ನಮ್ಮ ಬೆಂಗಳೂರು ಫೌಂಡೇಷನ್ ರವರು ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿ ಸಂ. 15511/2013 ಮತ್ತು 15500/2013 ಪ್ರಕರಣಗಳು ದಿನಾಂಕ 19–12–2014 ರಂದು ವಿಚಾರಣೆಗೆ ಬಂದ ಸಂದರ್ಭದಲ್ಲಿ ಅರ್ಜಿದಾರರು ಸರ್ಕಾರವು ಕೇವಲ ಸಣ್ಣ ಪ್ರಮಾಣದ ಒತ್ತುವರಿದಾರರನ್ನು ತೆರವುಗೊಳಿಸುತ್ತಿದ್ದು ದೊಡ್ಡ ಪ್ರಮಾಣದ ಒತ್ತುವರಿದಾರರನ್ನು ತೆರವುಗೊಳಿಸುತ್ತಿಲ್ಲವೆಂದು ನ್ಯಾಯಾಲಯದ ಗಮನಕ್ಕೆ ತಂದ ಸಂದರ್ಭದಲ್ಲಿ ಸರ್ಕಾರಿ ವಕೀಲರು ಈ ವಾದವನ್ನು ಒಪ್ಪದೇ ಸರ್ಕಾರವು ದೊಡ್ಡ ಪ್ರಮಾಣದ ಒತ್ತುವರಿದಾರರನ್ನು ಸಹ ತೆರವುಗೊಳಿಸುತ್ತಿರುವುದಾಗಿ ನ್ಯಾಯಾಲಯದ ಗಮನಕ್ಕೆ ತಂದರು. ಈ ವೇಳೆ ಮಾನ್ಯ ನ್ಯಾಯಾಲಯವು ಸಣ್ಣ ಮತ್ತು ದೊಡ್ಡ ಪ್ರಮಾಣದ ಒತ್ತುವರಿದಾರ ಅಂಕಿ ಅಂಶಗಳನ್ನು ನ್ಯಾಯಾಲಯದ ಗಮನಕ್ಕೆ ಒದಗಿಸುವಂತೆ ಸೂಚನೆ ನೀಡಿತು. ಅದರಂತೆ, 3 ಎಕರೆಗಿಂತ ಕಡಿಮೆ ಪ್ರಮಾಣದ ಒತ್ತುವರಿದಾರರು, 3 ರಿಂದ 5 ಎಕರೆ, 5 ರಿಂದ 10 ಎಕರೆ ಹಾಗೂ 10 ಎಕರೆಗೂ ಮೇಲ್ಪಟ್ಟ ಒತ್ತುವರಿದಾರರ ಮಾಹಿತಿಯನ್ನು ನ್ಯಾಯಾಲಯದ ಗಮನಕ್ಕೆ ತರಲಾಗಿದೆ. ಹಾಗೂ ಮೊದಲ ಆದ್ಯತೆಯಲ್ಲಿ 5 ಎಕರೆಗೂ ಮೇಲ್ಪಟ್ಟ ಒತ್ತುವರಿದಾರರನ್ನು ಖುಲ್ಲಾಪಡಿಸಲು ಕ್ರಮ ಕೈಕೊಳ್ಳುವಂತೆ ದಿನಾಂಕ 20–12–2014 ರಂದು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಮುಂದುವರೆದು ದಿನಾಂಕ 30–01–2015 ರಂದು ವಿಚಾರಣಾ ಸಂದರ್ಭದಲ್ಲಿ ರಿಟ್ ಅರ್ಜಿ ಸಂ. 11901/2014 ರ ಪರ ವಕೀಲರು ನಮೂನೆ 50, 53 ರ ಬಾಕಿ ಇರುವ ಪ್ರಕರಣಗಳಲ್ಲಿ ಸಹ ಒತ್ತುವರಿ ತೆರವು ಮಾಡಲಾಗುತ್ತಿದೆ ಎಂದು ನ್ಯಾಯಾಲಯಕ್ಕೆ ತಿಳಿಸಿದ್ದು, ಮಾನ್ಯ ನ್ಯಾಯಾಲಯವು ಅಂತಹ ಬಾಕಿ ಇರುವ ಪ್ರಕರಣಗಳು ಇತ್ಯರ್ಥವಾಗುವವರೆಗೆ ಒತ್ತುವರಿ ತೆರವುಗೊಳಿಸದಂತೆ ಸೂಚನೆ ನೀಡಿದೆ. ಇದಕ್ಕೆ ಪೂರಕವಾಗಿ ಸರ್ಕಾರವು ಈಗಾಗಲೇ ದಿನಾಂಕ 17–1–2015 ರಂದು ಸುತ್ತೋಲೆ ಹೊರಡಿಸಿ ನಮೂನೆ 50, 53 ಅರ್ಜಿಗಳ ಅರ್ಹತೆಯನ್ನು ನಿರ್ಧರಿಸುವವರೆಗೆ ಈ ಪ್ರದೇಶಗಳಿಂದ ಅರ್ಜಿದಾರರನ್ನು ತೆರವುಗೊಳಿಸಬಾರದು ಎಂದು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಸಚಿವರು ಪ್ರಕಟಿಸಿದರು.

ಬಾಬು:ಜಿಪಿಆರ್.

## ಅಡಿಗೆ ಮತ್ತು ಅಡಿಗೆ ಸಹಾಯಕರ ಗೌರವಧನ ವೇತನ ಹೆಚ್ಚಳಕ್ಕೆ ಸರ್ಕಾರ ಬದ್ಧ

**ಬೆಂಗಳೂರು, ಫೆಬ್ರವರಿ 13 (ಕರ್ನಾಟಕ ವಾರ್ತೆ)**

ಮಧ್ಯಾಹ್ನದ ಬಿಸಿ ಊಟ ಯೋಜನೆಯಡಿ ಅಡಿಗೆ ಮತ್ತು ಅಡಿಗೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವವರಿಗೆ ನೀಡಲಾಗುತ್ತಿರುವ ಗೌರವ ಧನವನ್ನು ಹೆಚ್ಚಿಸಲು ಸರ್ಕಾರ ಬದ್ಧವಾಗಿದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ ಅವರು ತಿಳಿಸಿದರು.

ಈ ಯೋಜನೆಗೆ 1200 ಕೋಟಿ ರೂ. ಅನುದಾನದ ಅವಶ್ಯಕತೆ ಇದ್ದು ಕೇಂದ್ರ ಸರ್ಕಾರವು ಶೇಕಡ 75 ರಷ್ಟು ಹಾಗೂ ರಾಜ್ಯ ಸರ್ಕಾರವು ಶೇಕಡ 25 ರಷ್ಟು ಅನುದಾನವನ್ನು ಒದಗಿಸುತ್ತದೆ. ಪ್ರಸ್ತುತ ರಾಜ್ಯದಲ್ಲಿ ಒಟ್ಟಾರೆ

**1 ಲಕ್ಷದ 20 ಸಾವಿರ ಅಡಿಗೆ ಸಿಬ್ಬಂದಿಗಳು ಈ ಯೋಜನೆಯಡಿ ಕಾರ್ಯನಿರ್ವಹಿಸುತ್ತಿದ್ದು, ಅದರಲ್ಲಿ 49,959 ಮಂದಿ ಅಡುಗೆಯವರು ಹಾಗೂ 69,083 ಮಂದಿ ಅಡುಗೆ ಸಹಾಯಕರಿದ್ದಾರೆ ಎಂದು ಮಾಹಿತಿ ನೀಡಿದರು.**

**ವಿಧಾನ ಪರಿಷತ್ತಿನಲ್ಲಿಂದು ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ಜಿ.ಎಸ್. ನ್ಯಾಮಗೌಡ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ಮುಖ್ಯ ಅಡುಗೆಯವರಿಗೆ 1700 ರೂ ಹಾಗೂ ಅಡುಗೆ ಸಹಾಯಕರಿಗೆ 1600 ರೂ. ವೇತನ ಗೌರವಧನವನ್ನು ನೀಡಲಾಗುತ್ತಿದೆ. ಇದು ನಿಜಕ್ಕೂ ಕಡಿಮೆಯಾಗಿದ್ದು, ನಾನು ಈಗಾಗಲೇ ಕೇಂದ್ರ ಸಚಿವೆ ಸ್ಮೃತಿ ಇರಾನಿಯವರೊಂದಿಗೆ ಖುದ್ದಾಗಿ ಚರ್ಚಿಸಿದ್ದು ಪತ್ರ ಕೂಡ ಬರೆದಿದ್ದೇನೆ. ಸಧ್ಯದಲ್ಲಿಯೇ ಅವರ ಗೌರವಧನವನ್ನು ಹೆಚ್ಚಿಸುವುದಾಗಿ ಭರವಸೆ ನೀಡಿದ್ದಾರೆ. ಕೇಂದ್ರ ಸರ್ಕಾರವು ತಮ್ಮ ಭಾಗದ ಶೇಕಡ 75 ರಷ್ಟನ್ನು ಹೆಚ್ಚಿಸಿದರೆ ಕೂಡಲೇ ರಾಜ್ಯ ಸರ್ಕಾರವೂ ಶೇಕಡ 25 ರಷ್ಟನ್ನು ಹೆಚ್ಚಿಸುವುದಾಗಿ ಸಚಿವರು ಭರವಸೆ ನೀಡಿದರು.**

**ಶಾಲಾ ವಿದ್ಯಾರ್ಥಿಗಳು ಹೆಚ್ಚಿರುವ ಶಾಲೆಗಳಲ್ಲಿ ಇಬ್ಬರು ಅಡುಗೆಯ ಸಹಾಯಕರನ್ನು ನೇಮಿಸಿಕೊಳ್ಳಲು ಅವಕಾಶವಿದೆಯೆಂದು ಸಚಿವರು ಇದೇ ಸಂದರ್ಭದಲ್ಲಿ ಸ್ಪಷ್ಟಪಡಿಸಿದರು.**

ಬಿಜಿಪಿ:ಜಿಪಿಆರ್

# ಮಕ್ಕಳಿಗೆ ನೀಡುತ್ತಿರುವ ಹಾಲಿನ ಪುಡಿ ಆರೋಗ್ಯಭರಿತವಾಗಿದೆ

**ಬೆಂಗಳೂರು, ಫೆಬ್ರವರಿ 13 (ಕರ್ನಾಟಕ ವಾರ್ತೆ)**

ಕ್ಷೀರಭಾಗ್ಯ ಯೋಜನೆಯಡಿ ಶಾಲಾ ಮಕ್ಕಳಿಗೆ ನೀಡಲಾಗುತ್ತಿರುವ ಹಾಲಿನಪುಡಿ ಆರೋಗ್ಯಭರಿತವಾಗಿದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ ಅವರು ವಿಧಾನ ಪರಿಷತ್ತಿನಲ್ಲಿಂದು ಸ್ಪಷ್ಟಪಡಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ಇ. ಕೃಷ್ಣಪ್ಪ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು ಈ ಯೋಜನೆಯಲ್ಲಿ ಪ್ರತಿ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ 18 ಗ್ರಾಂ ಕೆನೆಭರಿತ ಹಾಲಿನ ಪುಡಿಯು ವೈಜ್ಞಾನಿಕವಾಗಿ ಪರಿಷ್ಕರಿಸಲಾಗಿದ್ದು ಆರೋಗ್ಯಭರಿತವಾಗಿದೆ. ಹಾಲಿನ ಪುಡಿಯು ಖರ್ಚಾಗುತ್ತಿಲ್ಲವೆಂಬ ಉದ್ದೇಶದಿಂದ ಈ ಯೋಜನೆಯನ್ನು ಪ್ರಾರಂಭಿಸಲಾಗಿದೆ ಎಂಬ ಆರೋಪ ಸತ್ಯಕ್ಕೆ ದೂರವಾದುದು ಎಂದು ಹೇಳಿದರು.

ಕ್ಷೀರಭಾಗ್ಯ ಯೋಜನೆಯ ಪ್ರಾರಂಭದಲ್ಲಿ 5 ರಿಂದ 6 ತಿಂಗಳ ಕಾಲ ಸಮಸ್ಯೆಯುಂಟಾಗಿತ್ತು. ಹಾಲಿನ ಪುಡಿ ತಯಾರಾದ ಒಂದು ವಾರದೊಳಗೆ ರಾಜ್ಯದ ಎಲ್ಲಾ ಶಾಲೆಗಳಿಗೆ ತಲುಪುವಂತೆ ಕ್ರಮ ವಹಿಸಲಾಗಿದ್ದು 1 ಕೆಜಿ ಹಾಲಿನ ಪುಡಿಯನ್ನು ನಮ್ಮ ಇಲಾಖೆಯ ಬೇಡಿಕೆಯ ಮೇಲೆ ಡೈರಿಯವರು ಪೂರೈಸುತ್ತಿದೆ. ಹಾಗೆಯೇ ಹಾಲಿನ ಪುಡಿಯ ಪ್ಯಾಕೆಟ್ ಮೇಲೆ ತಯಾರಿಕೆಯಾದ ದಿನಾಂಕ ಹಾಗೂ ಅವಧಿ ಮುಗಿದ ದಿನಾಂಕವನ್ನು ನಮೂದಿಸಲಾಗುತ್ತಿದೆ ಎಂದು ಸಚಿವರು ಸದನಕ್ಕೆ ಹಾಲಿನ ಪುಡಿಯ ಪ್ಯಾಕೇಟ್‌ಅನ್ನೇ ತಂದು ತೋರಿಸಿದರು.

ಹಾಲಿನ ಪುಡಿಯಲ್ಲಿ ಯಾವುದೇ ನ್ಯೂನ್ಯತೆ ಕಂಡು ಬಂದರೆ ನಿರ್ದಾಕ್ಷಿಣ್ಯವಾಗಿ ಕೇಸ್‌ಅನ್ನು ಹಾಕಬಹುದಾಗಿದೆ. ಮಕ್ಕಳಿಗೆ ನೀಡುವ ಈ ಹಾಲಿನ ಪುಡಿಯಲ್ಲಿ ಯಾವುದೇ ನ್ಯೂನ್ಯತೆ ಇಲ್ಲದಂತೆ ನೋಡಿಕೊಳ್ಳಲು ಸರ್ಕಾರವು ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಂಡಿದ್ದು, ಕ್ಷೀರಭಾಗ್ಯ ಯೋಜನೆಗೆ ಸರ್ಕಾರವು 370 ಕೋಟಿ ರೂ. ಅನುದಾನವನ್ನು ಬಿಡುಗಡೆ ಮಾಡಿದೆ. ಅದರಲ್ಲಿ 297 ಕೋಟಿ ರೂ.ಗಳಷ್ಟು ವೆಚ್ಚ ಮಾಡಲಾಗಿದೆ ಎಂದು ಸಚಿವರು ತಿಳಿಸಿದರು.

ಮಧ್ಯಾಹ್ನದ ಬಿಸಿ ಊಟದ ಯೋಜನೆಯನ್ನು ರಾಜ್ಯ ಸರ್ಕಾರವು ಅತ್ಯುತ್ತಮವಾಗಿ ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ನಮ್ಮ ರಾಜ್ಯವು ದೇಶದಲ್ಲಿ ಮೊದಲ ಸ್ಥಾನವನ್ನು ಪಡೆದಿದೆ. ಎಂದು ಸದನಕ್ಕೆ ಮಾಹಿತಿ ನೀಡಿದರು.

ಬಿಜಿಪಿ/ಕೆಎಂ

## ವಿಮಾನ ನಿಲ್ದಾಣ ಪೂರ್ಣಗೊಳಿಸುವಂತೆ ಕೇಂದ್ರ ಸಚಿವರ ಬಳಿಗೆ ನಿಯೋಗ

**ಬೆಂಗಳೂರು, ಫೆಬ್ರವರಿ 13 (ಕರ್ನಾಟಕ ವಾರ್ತೆ)**

ರಾಜ್ಯದ 5 ವಿಮಾನ ನಿಲ್ದಾಣಗಳನ್ನು ಶೀಘ್ರದಲ್ಲಿ ಪೂರ್ಣಗೊಳಿಸಿಕೊಡುವಂತೆ ಮಾರ್ಚ್ ಮಾಹೆಯ ಮೊದಲ ವಾರದಲ್ಲಿ ಕೇಂದ್ರ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರ ಬಳಿಗೆ ಎಲ್ಲಾ 5 ಜಿಲ್ಲೆಗಳ ಜನಪ್ರತಿನಿಧಿಗಳ ನಿಯೋಗವನ್ನು ಕರೆದುಕೊಂಡು ಹೋಗುವುದಾಗಿ ವಾರ್ತಾ, ಮೂಲ ಸೌಲಭ್ಯ ಅಭಿವೃದ್ಧಿ ಮತ್ತು ಹಜ್ ಸಚಿವ ಶ್ರೀ ಆರ್. ರೋಷನ್ ಬೇಗ್ ಅವರು ತಿಳಿಸಿದರು.

ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಂದು ಶಿವಮೊಗ್ಗ, ಕಲಬುರಗಿ, ವಿಜಯಾಪುರ, ಬಳ್ಳಾರಿ ಮತ್ತು ಬೀದರ್ ಜಿಲ್ಲೆಗಳ ಜನಪ್ರತಿನಿಧಿಗಳು, ಸಚಿವರು, ಇಲಾಖಾ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳೊಂದಿಗೆ ಹೊಸ ವಿಮಾನ ನಿಲ್ದಾಣಗಳ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನೆ ನಂತರ ಸಚಿವರು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಬಹಳಷ್ಟು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ನಮ್ಮ ಸರ್ಕಾರವು ದಾರಾಳವಾಗಿ ಅನುದಾನವನ್ನು ನೀಡಲು ಸಿದ್ಧವಿದೆ. ಆದರೆ ಈ 5 ಜಿಲ್ಲೆಗಳಲ್ಲಿ ವಿವಿಧ ಕಾರಣಗಳಿಂದ ಹಾಗೂ ಖಾಸಗಿ ಅಭಿವೃದ್ಧಿದಾರರ ನಡುವಿನ ವೈಮನಸ್ಸಿನ ಇರುವ ಕಾರಣದಿಂದ ಕಾಮಗಾರಿಯು ಕುಂಠಿತಗೊಂಡಿದೆ. ಆದ್ದರಿಂದ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾ ಅವರ ಮೂಲಕ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಿ ಕೊಡುವ ಮೂಲಕ 5 ಜಿಲ್ಲೆಗಳಲ್ಲಿ ವಿಮಾನ ಹಾರಾಟವನ್ನು ಶೀಘ್ರದಲ್ಲಿ ಪ್ರಾರಂಭಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವ ಸಲುವಾಗಿ ತಮ್ಮ ನೇತೃತ್ವದಲ್ಲಿ ನಿಯೋಗವನ್ನು ಕರೆದುಕೊಂಡು ಹೋಗಿ ಚರ್ಚಿಸಲಾಗುವುದೆಂದರು.

ವಿಧಾನ ಪರಿಷತ್ತಿನ ಕಲಾಪ ವೇಳೆಯಲ್ಲಿ ಈ ಕುರಿತು ಬಹಳಷ್ಟು ಸದಸ್ಯರು ಪ್ರಶ್ನೆಗಳನ್ನು ಕೇಳಿದ್ದರು. ಉತ್ತರದ ವೇಳೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವ ಸಲುವಾಗಿ ನಿಯೋಗವನ್ನು ಕರೆದೊಯ್ಯುವುದಾಗಿ

ಆಶ್ವಾಸನೆ ನೀಡಿದ್ದಂತೆ ದೆಹಲಿಗೆ ಮಾರ್ಚ್ ಮಾಹೆಯ ಮೊದಲ ವಾರದಲ್ಲಿ ನಿಯೋಗವನ್ನು ಕರೆದೊಯ್ಯಲಾಗುವುದೆಂದರು. ಅದಕ್ಕೆ ಸಂಬಂಧಿಸಿದಂತೆ ಪೂರ್ವಭಾವಿ ಸಭೆಯನ್ನು ನಡೆಸುವ ಮೂಲಕ ಈ ಸಭೆಯಲ್ಲಿ ಎಲ್ಲಾ ಜನಪ್ರತಿನಿಧಿಗಳ ಸಲಹೆ ಸೂಚನೆಯನ್ನು ಪಡೆಯಲಾಯಿತೆಂದು ಸಚಿವರು ತಿಳಿಸಿದರು.

ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀಮತಿ ವಂದಿತಾ ಶರ್ಮ ಅವರು 5 ಕಾಮಗಾರಿಗಳ ವಸ್ತುಸ್ಥಿತಿ, ವ್ಯಾಜ್ಯಗಳು ಹಾಗೂ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕಾಗಿರುವ ಮನವಿಗಳ ಕುರಿತು ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟರು.

ಈ ಸಭೆಯಲ್ಲಿ ಸಚಿವರಾದ ಎಂ.ಬಿ. ಪಾಟೀಲ್, ಖಮರುಲ್ ಇಸ್ಲಾಂ, ವಿಧಾನ ಪರಿಷತ್ತಿನ ಸಭಾಪತಿ ಡಿ.ಹೆಚ್. ಶಂಕರಮೂರ್ತಿ, ವಿರೋಧ ಪಕ್ಷದ ನಾಯಕ ಕೆ.ಎಸ್. ಈಶ್ವರಪ್ಪ, ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಅಪ್ಪಾಜಿ ಸಿ.ಎಸ್. ನಾಡಗೌಡ, ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರು 5 ಜಿಲ್ಲೆಗಳ ಜಿಲ್ಲಾಧಿಕಾರಿಗಳು ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳು ಚರ್ಚೆಯಲ್ಲಿ ಭಾಗವಹಿಸಿದ್ದರು.

ಜಿಜಿಎಂ/ಕೆಎಂ

## ಆನೇಕಲ್ ಬಳಿ ರೈಲು ದುರಂತ ಮಾಹಿತಿ ಪಡೆಯಲು – ಸಹಾಯವಾಣಿ ಸಂಖ್ಯೆ

**ಬೆಂಗಳೂರು, ಫೆಬ್ರವರಿ 13 (ಕರ್ನಾಟಕ ವಾರ್ತೆ)**

**ಬೆಂಗಳೂರಿನಿಂದ ಎರ್ನಾಕುಲಂಗೆ ಹೋಗುವ ಇಂಟರ್ ಸಿಟಿ ರೈಲು ಫೆಬ್ರವರಿ 13 ರಂದು ಆನೇಕಲ್ ಬಳಿ ಹಳಿತಪ್ಪಿ ದುರಂತ ಸಂಭವಿಸಿರುವ ಹಿನ್ನಲೆಯಲ್ಲಿ ಸಾರ್ವಜನಿಕರು ಮಾಹಿತಿಯನ್ನು ಪಡೆಯಲು ಅನುಕೂಲವಾಗುವಂತೆ ಸಹಾಯವಾಣಿ 080 – 22941166 ಹಾಗೂ 9731666751 ದೂರವಾಣಿ ಸಂಖ್ಯೆ ಒದಗಿಸಿದೆ.**

**ರೈಲ್ವೇ ಎ.ಡಿ.ಜಿ.ಪಿ ಶ್ರೀ ಆರ್.ಪಿ. ಶರ್ಮ ಅವರ ದೂರವಾಣಿ ಸಂಖ್ಯೆ 22223979 ಹಾಗೂ 9480800023 ಸಂಪರ್ಕಿಸಬಹುದಾಗಿದೆ.**

**ಬಾಬು:ಜಿಪಿಆರ್.**

## ವಿವಿಧ ಧಾನ್ಯಗಳಿಗೆ ಬೆಂಬಲ ಬೆಲೆ ನಿಗಧಿ

**ಬೆಂಗಳೂರು, ಫೆಬ್ರವರಿ 13 (ಕರ್ನಾಟಕ ವಾರ್ತೆ)**

**2014–15 ನೇ ಸಾಲಿನ ಕನಿಷ್ಠ ಬೆಂಗಳ ಬೆಳೆ ಯೋಜನೆಯಡಿ ಸರ್ಕಾರ ನಿಗದಿಪಡಿಸಿದ ಅವಧಿ ಮತ್ತು ದರಗಳು ಇಂತಿವೆ. ಕ್ವಿಂಟಾಲ್ ಭತ್ತಕ್ಕೆ 1360 ರೂ. (ಸಾಮಾನ್ಯ ಭತ್ತ), 1400 (ಗ್ರೇಡ್ ಎ ಭತ್ತ) ಮುಕ್ತಾಯದ**

**ಅವಧಿ ಮಾರ್ಚ್ 21 ಆಗಿದೆ. ಮೆಕ್ಕೆ ಜೋಳ – ರೂ 1100 – ಖರೀದಿ ಮುಕ್ತಾಯದ ಅವಧಿ ಫೆಬ್ರವರಿ – 21, ಬಿಳಿ ಜೋಳ, (ಮಾಲ್ದಾಂಡಿ), ರಾಗಿ ಕ್ವಿಂಟಾಲ್ ರೂ 2000/–, ಖರೀದಿ ಮುಕ್ತಾಯದ ಅವಧಿ ಮಾರ್ಚ್ 31 ಆಗಿದೆ.**

**ರಾಜ್ಯಾದ್ಯಂತ 322 ಖರೀದಿ ಕೇಂದ್ರಗಳನ್ನು ತೆರೆಯಲಾಗಿಎದು, ಧಾನ್ಯಗಳ ಸಂಗ್ರಹಣೆ ಮಾಡಲಾಗುತ್ತಿದೆ. ಸಂಗ್ರಹಣೆ ಕಾರ್ಯವನ್ನು ಮುಕ್ತಾಯಗೊಳಿಸಲು ಸರ್ಕಾರ ನಿಗದಿಪಡಿಸಿದ ದಿನಾಂಕವು ಅಂತಿಮವಾಗಿದ್ದು ಮತ್ತಿ ವಿಸ್ತರಿಸಲಾಗುವುದಿಲ್ಲ. ರಾಜ್ಯದ ರೈತ ಭಾಂಧವರು ಸರ್ಕಾರು ಒದಗಿಸಿರುವ ಸೌಲಭ್ಯವನ್ನು ನಿಗದಿತ ಅವಧಿಯೊಳಗೆ ಸದುಪಯೋಗಪಡಿಸಿಕೊಳ್ಳಬೇಕೆಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

ಬಾಬು:ಜಿಪಿಆರ್

# ತತ್ವಪದ ಸಂಪುಟಗಳ ಬಿಡುಗಡೆಗೆ ಸರ್ಕಾರ 60 ಲಕ್ಷ ರೂ. ಅನುದಾನ

**ಬೆಂಗಳೂರು, ಫೆಬ್ರವರಿ 13 (ಕರ್ನಾಟಕ ವಾರ್ತೆ)**

ತತ್ವ ಪದ ಸಂಪುಟಗಳ ಬಿಡುಗಡೆಗಾಗಿ ಸರ್ಕಾರವು 60 ಲಕ್ಷ ರೂ. ಅನುದಾನವನ್ನು ಬಿಡುಗಡೆ ಮಾಡಿದ್ದು, ಪ್ರಸಕ್ತ ವರ್ಷವೇ ಬಿಡುಗಡೆ ಮಾಡುವ ಗುರಿ ಹೊಂದಿದ್ದು, ಈಗಾಗಲೇ ಮುದ್ರಣ ಕಾರ್ಯವನ್ನು ಆರಂಭಿಸಲಾಗಿದೆ ಎಂದು ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಸಮನ್ವಯಾಧಿಕಾರಿಗಳಾದ ಶ್ರೀ ಕಾ.ತ. ಚಿಕ್ಕಣ್ಣ ಅವರು ಹೇಳಿದರು.

ಕನ್ನಡ ಭವನದ ಅಂತರಂಗದಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತ ತತ್ವಪದಗಳು ಕೇವಲ ಸಾಹಿತ್ಯಕ ಅಭಿವ್ಯಕ್ತಿ ಮಾತ್ರವಲ್ಲದೆ ನೇರ ನಿಷ್ಠುರ ಹಾಗೂ ಮಾನವೀಯ ಧರ್ಮ ಪ್ರತಿಪಾದನೆಯುಳ್ಳ ಅಂತ:ಕರಣವುಳ್ಳ ಲಿಂಗಬೇಧವಿಲ್ಲದ ನಮ್ಮ ಬದುಕಲ್ಲಿ ಹಾಸುಹೊಕ್ಕಾಗಿರುವ ಸಾಹಿತ್ಯ ಪ್ರಕಾರದ ಕನ್ನಡ ಸಾಹಿತ್ಯ ಪರಂಪರೆಯ ಒಂದು ಪ್ರಬಲ ಧ್ವನಿಯಾಗಿದೆ ಎಂದು ತಿಳಿಸಿದರು. ಶಿವರಾತ್ರಿಯ ಪ್ರಯುಕ್ತ "ತತ್ವಪದ ಗಾಯನದ ತತ್ವಪದ ಕಾವ್ಯ ಶಿವರಾತ್ರಿ"ಕಾರ್ಯಕ್ರಮಯನ್ನು ಆಯೋಜಿಸಿದ್ದು ಸಾಹಿತ್ಯಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಲು ತಿಳಿಸಿದರು.

ಜೀವನ ದರ್ಶನವನ್ನೊಳಗೊಂಡ ತತ್ವಪದಗಳನ್ನು ಅವುಗಳ ತಾಜಾತನದಲ್ಲೇ ಪ್ರಸ್ತುತಪಡಿಸುವ ವಿಶೇಷ ಕಾರ್ಯಕ್ರವಾಗಿದ್ದು, ಜನಪದೀಯ ಕಲಾ ಸೂಕ್ಷ್ಮಗಳನ್ನೊಳಗೊಂಡ ವೇದಿಕೆ ನಿರ್ಮಾಣವಾಗುತ್ತಿದ್ದು, 12 ಜಿಲ್ಲೆಗಳ 12 ತಂಡಗಳ ಪ್ರದರ್ಶನದ ಜೊತೆಗೆ 14 ಜಿಲ್ಲೆಗಳಿಂದ ವಿಶೇಷ ಕೇಳುಗರನ್ನಾಗಿ ತತ್ವಪದಕಾರರ 14 ತಂಡಗಳನ್ನು ಆಹ್ವಾನಿಸಲಾಗಿದೆ. ಈ ವಿಶೇಷ ಕಾರ್ಯಕ್ರಮಕ್ಕೆ ರಾಜ್ಯದ ಸುಮಾರು 120ಕ್ಕೂ ಹೆಚ್ಚು ತತ್ವಪದಕಾರರು ಒಂದೆಡೆ ಸೇರಲಿದ್ದಾರೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಕಾವ್ಯ ಮಂಡಲದ ಎಂ.ಫಿಲ್ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು.

ಈ ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಕರ್ನಾಟಕ ಜಾನಪದ ಅಕಾಡೆಮಿ ಹಾಗೂ ಕಾವ್ಯ ಮಂಡಲ ಸಂಸ್ಥೆಗಳು ಒಟ್ಟಿಗೆ ಸೇರಿ "ತತ್ವಪದ ಗಾಯನದ ತತ್ವಪದ ಕಾವ್ಯ ಶಿವರಾತ್ರಿ" ಆಯೋಜಿಸಿವೆ. ಈ ಕಾರ್ಯಕ್ರಮಕ್ಕೆ ಫೆಬ್ರವರಿ 17ರಂದು ಮುಕ್ತ ಪ್ರವೇಶವಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಸಂಘಟಕರು ಕೋರಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಜಾನಪದ ಅಕಾಡೆಮಿ ಹಾಗೂ ಕರ್ನಾಟಕ ಜಾನಪದ ಪರಿಷತ್‌ನ ಸಂಯುಕ್ತಾಶ್ರಯದಲ್ಲಿ ನಾಡೋಜ ಎಚ್.ಎಲ್. ನಾಗೇಗೌಡ ಜನ್ಮಶತಮಾನೋತ್ಸವ ಆಚರಣೆಯನ್ನು ಇದೇ ಫೆಬ್ರವರಿ 14 ಹಾಗೂ 15ರಂದು ಕಲಾಗ್ರಾಮದಲ್ಲಿ ಹಮ್ಮಿಕೊಂಡಿದೆ. ಪ್ರಪ್ರಥಮವಾಗಿ ನಾಡೋಜ ನಾಗೇಗೌಡ ಅವರ ಹೆಸರಿನಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಯನ್ನು ನೀಡಲಾಗುತ್ತಿದ್ದು, ಈ ಪ್ರಶಸ್ತಿಯು ಒಂದು ಲಕ್ಷ ರೂ.ಗಳ ನಗದನ್ನು ಹೊಂದಿದೆ. ಈ ಬಾರಿಯ ಪ್ರಶಸ್ತಿಯನ್ನು ಛತ್ತೀಸ್‌ಗಡ ಪಂಡ್ವಾನಿ ಕಲಾವಿದರು ಹಾಗೂ ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ತೀಜನ್‌ಬಾಯ್ ಅವರಿಗೆ ನೀಡಲಾಗುತ್ತಿದೆ. ನಾಗೇಗೌಡರ ಜನ್ಮಶತಮಾನೋತ್ಸವ ಸಂದರ್ಭದಲ್ಲಿ ನಾಡಿನ ಮೂಲ ಜನಪದ ಗಾಯಕರು ಹಾಡಿರುವ ನೂರು ಗಂಟೆಗಳ ಧ್ವನಿಸಾಂದ್ರಿಕೆಗಳ ನೂರು ಸಿಡಿಗಳನ್ನು ಬಿಡುಗಡೆ ಮಾಡಲಾಗುವುದು.

ಪತ್ರಿಕಾಗೋಷ್ಠಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿನಿರ್ದೇಶಕರಾದ ಮಲ್ಲಿಕಾರ್ಜುನ ಸ್ವಾಮಿ ಹಾಗೂ ಬಲವಂತರಾವ್ ಪಾಟೀಲ, ಕಾವ್ಯ ಮಂಡಲದ ಸಂಯೋಜನಾಧಿಕಾರಿ ಡಾ: ಟಿ. ವೆಂಕಟೇಶಮೂರ್ತಿ ಉಪಸ್ಥಿತರಿದ್ದರು.

ಬಾಬು/ಕೌಸಲ್ಯ/ಕೆಎಂ

## **ಲೋಕ ಸೇವಾ ಆಯೋಗಕ್ಕೆ ನೂತನ ಅಧ್ಯಕ್ಷರು ಸದಸ್ಯರ ನೇಮಕದ ನಂತರ, ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ಮತ್ತೆ ಚಾಲನೆ**

**ಬೆಂಗಳೂರು, ಫೆಬ್ರವರಿ 13 ( ಕರ್ನಾಟಕ ವಾರ್ತೆ ) :**

**ಕರ್ನಾಟಕ ರಾಜ್ಯ ಲೋಕ ಸೇವಾ ಆಯೋಗಕ್ಕೆ ನೂತನ ಅಧ್ಯಕ್ಷರು ಹಾಗೂ ಖಾಲಿ ಇರುವ ಸದಸ್ಯರನ್ನು ನೇಮಕ ಮಾಡಿದ ನಂತರ, ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಮತ್ತೆ ಚಾಲನೆ ದೊರೆಯಲಿದೆ ಎಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ರಾಜ್ಯ ವಿಧಾನ ಸಭೆಯಲ್ಲಿ ಶುಕ್ರವಾರ ಪ್ರಕಟಿಸಿದರು.**

ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರಿಸಿದ ಅವರು ರಾಜ್ಯ ಲೋಕ ಸೇವಾ ಆಯೋಗವು 2011 ರಲ್ಲಿ ನಡೆಸಿದ ಗೆಜೆಟೆಡ್ ಪ್ರೊಬೇಷನರ್ಸ್ ನೇಮಕಾತಿಗೆ ಸಂಬಂಧಿಸಿದಂತೆ ಆಯ್ಕೆ ಪ್ರಕ್ರಿಯೆಯಲ್ಲಿ ಅಕ್ರಮ, ಅವ್ಯವಹಾರ, ಭ್ರಷ್ಟಾಚಾರ ಹಾಗೂ ಸ್ವಜನ ಪಕ್ಷಪಾತ ನಡೆದಿದೆ ಎಂಬುದು ಸಿ ಐ ಡಿ ತನಿಖೆಯಿಂದ ಮೇಲ್ನೋಟಕ್ಕೆ ಕಂಡು ಬಂದ ಹಿನ್ನೆಲೆಯಲ್ಲಿ, ಆಡಳಿತದಲ್ಲಿ ಪಾರದರ್ಶಕತೆ ಹಾಗೂ ಪ್ರಾಮಾಣಿಕತೆಯನ್ನು ಕಾಯ್ದುಕೊಳ್ಳಲು ಆಯ್ಕೆ ಪಟ್ಟಿಯನ್ನು ರದ್ದುಗೊಳಿಸಲಾಗಿದೆ ಎಂದು ಮುಖ್ಯಮಂತ್ರಿ ಸಮರ್ಥಿಸಿಕೊಂಡರು.

ರಾಜ್ಯ ಲೋಕ ಸೇವಾ ಆಯೋಗದ ಆಡಳಿತ ಚಟುವಟಿಕೆಗಳಲ್ಲಿ ದಕ್ಷತೆ ಹಾಗೂ ಪಾರದರ್ಶಕತೆ ತರಲು ಕೇಂದ್ರ ಲೋಕ ಸೇವಾ ಆಯೋಗದ ಮಾಜಿ ಅಧ್ಯಕ್ಷ ಶ್ರೀ ಪಿ. ಸಿ. ಹೋಟಾ ಅವರ ನೇತೃತ್ವದ ಸಮಿತಿಯ ವರದಿಯ ಆಧರಿಸಿ ಹಲವು ಸುಧಾರಣಾ ಕ್ರಮಗಳನ್ನು ಈಗಾಗಲೇ ಜಾರಿಗೆ ತರಲಾಗಿದೆ.

2011 ರಲ್ಲಿ ನಡೆದ ಗೆಜೆಟೆಡ್ ಪ್ರೊಬೇಷನರ್ಸ್ ನೇಮಕಾತಿ ಪ್ರಕ್ರಿಯೆಯ ಪರೀಕ್ಷೆ ಹಾಗೂ ಸಂದರ್ಶನದಲ್ಲಿ ಅವ್ಯವಹಾರ ನಡೆದಿರುವ ಅಂಶಗಳು ಬೆಳಕಿಗೆ ಬಂದಿದೆ. ಆಯೋಗದ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಕೆಲವು ದಲ್ಲಾಳಿಗಳು ಸಂದರ್ಶನಕ್ಕೆ ಹಾಜರಾದ ಅಭ್ಯರ್ಥಿಗಳೊಂದಿಗೆ ದೂರವಾಣಿ ಮೂಲಕ ಸಂಪರ್ಕ ಸಾಧಿಸಿ ವ್ಯವಸ್ಥೆಯ ಜೊತೆ ರಾಜಿ ಮಾಡಿಕೊಂಡಿರುವುದು ಸಾಬೀತಾಗಿದೆ. ಅಲ್ಲದೆ, ಆಯೋಗದ ಅಂದಿನ ಕಾರ್ಯದರ್ಶಿ ಶ್ರೀ ಕೆ. ಆರ್. ಸುಂದರ್ ಅವರೂ ಅಪರಾಧ ಎಸಗಿರುವುದು ಸಿ ಐ ಡಿ ವರದಿಯಿಂದ ಸ್ಪಷ್ಟವಾದ ಕೂಡಲೇ ಅವರನ್ನು ಹುದ್ದೆಯಿಂದ ವರ್ಗಾವಣೆ ಮಾಡಿ, ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ನೋಟೀಸ್ ನೀಡಿ ಪ್ರಕರಣದಲ್ಲಿನ ಅವರ ಪಾತ್ರ ಕುರಿತಂತೆ ವಿವರಣೆ ಪಡೆಯಲಾಗಿದೆ. ಸಿ ಐ ಡಿ ಯ ಮಧ್ಯಂತರ ವರದಿಯನ್ನು ಆಧರಿಸಿ, ಆಯೋಗದ ಸದಸ್ಯೆ ಡಾ ಮಂಗಳಾ ಶ್ರೀಧರ್ ಅವರನ್ನು ಅಮಾನತ್ತುಗೊಳಿಸಿ, ಅವರ ಮೇಲೆ ಕ್ರಮ ಜರುಗಿಸಲು ರಾಜ್ಯಪಾಲರ ಅನುಮತಿ ಪಡೆಯಲಾಗಿದೆ.

ಖಾಲಿ ಇರುವ ಅಧ್ಯಕ್ಷರು ಹಾಗೂ ಸದಸ್ಯರ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಮುಗಿದ ಕೂಡಲೇ ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳ ನೇಮಕಾತಿಗೆ ಮತ್ತೆ ಚಾಲನೆ ದೊರೆಲಿದೆ. ಆದರೆ, ನೇಮಕಾತಿ ಪ್ರಕ್ರಿಯೆಯಲ್ಲಿನ ಮೀಸಲಾತಿಯಲ್ಲಿ ಯಾವುದೇ ಬದಲಾವಣೆಯಾಗುವುದಿಲ್ಲ. ಆದಕಾರಣ, ಸಾಮಾಜಿಕ ನ್ಯಾಯದಲ್ಲಿ ಯಾವುದೇ ವ್ಯತ್ಯಾಸ ಅಥವಾ ವ್ಯತ್ಯಯ ಉಂಟಾಗುವುದಿಲ್ಲ ಎಂದು ಶ್ರೀ ಸಿದ್ದರಾಮಯ್ಯ ಅವರು ವಿವರಿಸಿದರು.

ಪ್ರತಿಪಕ್ಷ ನಾಯಕ ಶ್ರೀ ಜಗದೀಶ್ ಶೆಟ್ಟರ್ ಅವರು ಮಧ್ಯ ಪ್ರವೇಶಿಸಿ, ಕೇಂದ್ರ ಲೋಕ ಸೇವಾ ಆಯೋಗದ ಮಾಜಿ ಅಧ್ಯಕ್ಷ ಶ್ರೀ ಪಿ. ಸಿ. ಹೋಟಾ ಅವರು ಮಾಡಿರುವ ಶಿಫಾರಸ್ಸಿನಂತೆ ಅನ್ವೇಷಣಾ ಸಮಿತಿ (ಸರ್ಚ್ ಕಮಿಟಿ) ಅಳವಡಿಸುವಂತೆ ಸರ್ಕಾರಕ್ಕೆ ಸಲಹೆ ಮಾಡಿದಾಗ, ಉತ್ತರಿಸಿದ ಮುಖ್ಯಮಂತ್ರಿ, ಈಗಾಗಲೇ ಬಹುತೇಕ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರಲಾಗಿದೆ ಎಂದು ತಿಳಿಸಿದರು.

## ಕರ್ನಾಟಕ ಲೋಕಸೇವಾ ಆಯೋಗದ ಸ್ವಷ್ಟೀಕರಣ

ಬೆಂಗಳೂರು, ಫೆಬ್ರವರಿ 13 (ಕರ್ನಾಟಕ ವಾರ್ತೆ

ಹೈದರಾಬಾದ್–ಕರ್ನಾಟಕ ಮೀಸಲಾತಿ ಕೋರಿ ಅರ್ಜಿ ಸಲ್ಲಿಸುವ ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ಸಲ್ಲಿಸಬೇಕಾಗಿರುವ ಪ್ರಮಾಣ ಪತ್ರದ ನಮೂನೆ ಕುರಿತು ಕರ್ನಾಟಕ ಲೋಕಸೇವಾ ಆಯೋಗವು ಈ ಕೆಳಕಂಡಂತೆ ಸ್ವಷ್ಟೀಕರಣ ನೀಡಿದೆ.

ಗೆಜೆಟೆಡ್ ಪ್ರೊಬೆಷನರ್ಸ್ 2014 ನೇ ಸಾಲಿನ ನೇಮಕಾತಿಗಾಗಿ ಹೈದರಾಬಾದ್–ಕರ್ನಾಟಕ ಮೀಸಲಾತಿ ಕೋರಿ ಅರ್ಜಿ ಸಲ್ಲಿಸುತ್ತಿರುವ ಸರ್ಕಾರಿ ನೌಕರರು ದಿನಾಂಕ 29–1–2014 ರಲ್ಲಿ ಹೊರಡಿಸಲಾದ ಅಧಿಸೂಚನೆ – 1 ಸಂಖ್ಯೆ ಡಿಪಿಎಆರ್ 43 ಹೆಚ್‌ಕೆ ಸಿ 2013 ರಲ್ಲಿನ ಅನುಬಂಧ–ಎ ನಲ್ಲಿ ಇರುವಂತೆ ತಮ್ಮ ಸೇವಾ ಪುಸ್ತಕದಲ್ಲಿ ದಿನಾಂಕ 1–1–2013 ಕ್ಕೆ ಮುಂಚಿನ ನಮೂದಿನಲ್ಲಿ ಅವರ ಸ್ವಂತ ಊರು ಅಥವಾ ಸ್ಥಳಕ್ಕೆ ಸಂಬಂಧಿಸಿದಂತೆ ಹೈದರಾಬಾದ್–ಕರ್ನಾಟಕ ಪ್ರದೇಶದ ಜಿಲ್ಲೆಗಳಾದ ಬೀದರ್, ಗುಲ್ಬರ್ಗಾ ಯಾದಗಿರಿ, ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಕಂದಾಯ ಜಿಲ್ಲೆಯ ಅಡಿಯಲ್ಲಿ ಬರುವಂತಹ ಪ್ರದೇಶದ ನಮೂದು ಇದ್ದ ಪಕ್ಷದಲ್ಲಿ ಅಂತಹ ಪ್ರಕರಣಗಳಲ್ಲಿ ಸರ್ಕಾರಿ ನೌಕರರ ಸೇವಾ ಪುಸ್ತಕ ಹೊಂದಿರುವ ಕಛೇರಿ ಮುಖ್ಯಸ್ಥರಿಂದ ಮೇಲೆ ತಿಳಿಸಿದ ಅಧಿಸೂಚನೆ (1) ರಲ್ಲಿನ ನಿಯಮ 5 (2) ರಂತೆ ನೀಡಲಾದ ಅನುಬಂಧ–ಎ ನಲ್ಲಿ ಸ್ವ–ಗ್ರಾಮ ಪ್ರಮಾಣ ಪತ್ರವನ್ನು ಅಭ್ಯರ್ಥಿಗಳು ಪಡೆದುಕೊಳ್ಳತಕ್ಕದೆಂದು ಸರ್ಕಾರವು ದಿನಾಂಕ 11–2–2015 ರ ತನ್ನ ಪತ್ರದಲ್ಲಿ ತಿಳಿಸಿದ್ದು, ಅದರಂತೆ ಅಭ್ಯರ್ಥಿಗಳು ಈ ನಮೂನೆಯಲ್ಲಿಯೇ ಪ್ರಮಾಣ ಪತ್ರ ಪಡೆದಿಟ್ಟುಕೊಳ್ಳುವಂತೆ ಆಯೋಗವು ಸೂಚಿಸಿದೆ.

ಬಿಜೆಪಿ/ಕೆಎಂ